# ಅಣಬೆಗಳ ಅವತಾರ

ಮಲೆನಾಡಿನ ಪರಿಸರದಲ್ಲಿ ವಿಶಿಷ್ಟವಾಗಿ ಅರಳಿಕೊಳ್ಳುವ ಬಣ್ಣ ಬಣ್ಣದ ಅಣಬೆಗಳ ಆಕಾರವು ವೈವಿಧ್ಯಮಯ. ಕೊಳೆತ ಮಣ್ಣಿನಾಳದಿಂದ ಮೊಳೆವ ಅಥವಾ ನೆಲದ ಮೇಲೆ ಬಿದ್ದು ಹಳತಾಗಿರುವ ಮರದ ಕಾಂಡಗಳ ಅಡಿಯಿಂದ ತಲೆ ಎತ್ತಿ ತನ್ನ ಇರುವನ್ನು ಸೂಚಿಸುವ ಅಣಬೆಗಳ ಗಾತ್ರದಲ್ಲೂ ವ್ಯತ್ಯಾಸವಿರುತ್ತದೆ. ಸ್ಥಳೀಯ ವನವಾಸಿಗರಿಗೆ ಈ ಅಣಬೆಗಳ ಬಗ್ಗೆ ಜ್ಞಾನವಿರುವ ಕಾರಣ ಅಣಬೆಗಳನ್ನು ಸಂಗ್ರಹಿಸಿ ಮಳೆಗಾಲದಲ್ಲಿ ತಮ್ಮ ಅಡುಗೆಗೆ ತರಕಾರಿಯ ಬದಲು ಬಳಸಿಕೊಳ್ಳುವರು. ಕೆಲವು ಅಣಬೆಗಳು ತಿನ್ನಲು ಯೋಗ್ಯವಾಗಿರುತ್ತವೆ. ಇನ್ನು ಕೆಲವು ಅಣಬೆಗಳು ವಿಷಕಾರಿಯೂ ಹೌದು. ಕೆಲವು ಅಣಬೆಗಳು ಕೆಲವೆ ಗಂಟೆಗಳ ಕಾಲ ಮಾತ್ರ ಅರಳಿಕೊಂಡರೆ ಇನ್ನು ಕೆಲವು ಅಣಬೆಗಳು ಒಂದೆರೆಡು ದಿನಗಳ ಆಯುಷ್ಯ ಹೊಂದಿರುತ್ತವೆ. ಅಣಬೆಗಳ ವಿನ್ಯಾಸದಲ್ಲಿ ಹೂವಿನ ಗುಚ್ಛದಂತೆ, ಹಾಲಿನ ಐಸ್‌ಕ್ರೀಂನಂತೆ, ಯಕ್ಷಗಾನದ ಕೀರೀಟದಂತೆ, ಗಂಟೆಗಳಂತೆ ಇನ್ನು ಕೆಲವು ಆಭರಣಗಳಂತೆ ಮನ ಸೆಳೆಯುತ್ತದೆ. ಅಣಬೆಗಳ ಈ ಅವತಾರ ಋತುಮಾನದ ಸಂಕೇತವಾಗಿ, ಸಾಕ್ಷಿಗಳಾಗಿ ನಿಲ್ಲುತ್ತವೆ.

**ಚಿತ್ರ-ಬರಹ: ದತ್ತಾತ್ರೇಯ ಭಟ್ಟ ಕಣ್ಣಿಪಾಲ, ಯಲ್ಲಾಪುರ**







# ಎಮ್ಮೆ ನಿನಗೆ ಸಾಟಿಯಿಲ್ಲಾ!

ರೈತನೊಬ್ಬ ತನ್ನ ಎಮ್ಮೆಗಳ ಮೈತೊಳೆಯುತ್ತಿರುವ ಈ ಚಿತ್ರವು ಗೋಟಗೋಡಿಯ ರಾಕ್ ಗಾರ್ಡನ್‌ನಲ್ಲಿದೆ. ಗ್ರಾಮೀಣ ಜನಜೀವನ ಪ್ರದರ್ಶಿಸುವ ಇಲ್ಲಿಯ ಶಿಲ್ಪಗಳಲ್ಲಿ ಇದೂ ಒಂದು. ಎಮ್ಮೆಯ ನೈಜತೆ, ಹೊಳೆ ಹಾಗೂ ಪರಿಸರದದೊಂದಿಗೆ ಈ ಶಿಲ್ಪಗಳು 'ನಿಜ' ಎನಿಸುತ್ತವೆ.

**-ಕೆ.ಜೆ. ಜ್ಯೋತಿಪ್ರಭಾ, ಕುಮಟಾ**

# ಮಕ್ಕಳಿಗೆ ಅಮ್ಮಂದಿರ ಪೂಜೆ

ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ, ತಾಲ್ಲೂಕು ರಾಮಗಿರಿ ಹೋಬಳಿಯ ಮಲ್ಲಾಡಿಹಳ್ಳಿ ಗ್ರಾಮದಲ್ಲಿ ಪ್ರತಿ 2 ವರ್ಷಕ್ಕೊಮ್ಮೆ ಗುಳ್ಳಮ್ಮ ದೇವಿ ಉತ್ಸವ ಜರುಗುತ್ತದೆ. ಅಂದು ಮಕ್ಕಳಿಗೆ ಹೂವಿನ ಹಾರ ಹಾಕಿ. ಅಕ್ಷತೆ ಹಾಕಿ, ಪೂಜೆ ಸಲ್ಲಿಸಿ ಅವರ ಕಾಲಿಗೆ ಅಮ್ಮಂದಿರು ನಮಸ್ಕರಿಸುತ್ತಾರೆ. ಮಕ್ಕಳ ತಲೆಯ ಮೇಲೆ ಹಳದಿ ಭಂಡಾರ ತುಂಬಿದ ತಟ್ಟೆ ಹೊರಿಸಿ ದೇವಸ್ಥಾನದ ಸುತ್ತ ಪ್ರದಕ್ಷಿಣೆ ಹಾಕಿಸುತ್ತಾರೆ. ತಾಯಿಯ ಜೊತೆ ಮನೆಯಲ್ಲಿನ ದೊಡ್ಡಮ್ಮ, ಅತ್ತೆ, ಅಜ್ಜಿ, ಚಿಕ್ಕಮ್ಮ ಮಕ್ಕಳಿಗೆ ನಮಸ್ಕರಿಸಿ ಕಾಣಿಕೆಯನ್ನೂ ನೀಡುತ್ತಾರೆ. ಇದು ಹರಕೆಯ ರೂಪವಾಗಿದ್ದು ಈ ರೀತಿ ಮಾಡುವುದರಿಂದ ಮಕ್ಕಳಿಗೆ ಯಾವುದೇ ರೀತಿಯ ರೋಗ ರುಜಿನ ಬರುವುದಿಲ್ಲ ಎಂಬ ನಂಬಿಕೆಯಿದೆ. ಆ ದಿನ ಮಕ್ಕಳು ದೈವಸ್ವರೂಪಿಗಳು ಎಂದು ನಂಬುತ್ತಾರೆ.

**-ಡಾ. ಕೆ.ವಿ. ಸಂತೋಷ್ ಹೊಳಲ್ಕೆರೆ, ಚಿತ್ರದುರ್ಗ**

